ಎಂದು ದೇವರಲ್ಲಿ ಕೇಳಿಕೊಳ್ಳುತ್ತೇನೆ. ಮಾನ್ಯ ಅಧ್ಯಕ್ಷರು ನನಗೆ ಅವಕಾಶ ಕೊಟ್ಟಿದ್ದಕ್ಕೆ ಬಹಳ ಸಂತೋಷ. ನಾನೂ ಒಂದು ಸಾರಿ ತೀರಿ ಹೋಗುತ್ತೇನೆ, ತೀರಿ ಹೋದ ಮೇಲೆ ಒಬ್ಬ ಒಳ್ಳೆಯ ವ್ಯಕ್ತಿ ಇದ್ದ ಎಂದು ಹೇಳಬೇಕೆಂದು ಕೇಳಿಕೊಂಡು, ಮೃತರಿಗೆ ಶಾಂತಿ ಸಿಗಲಿ ಎಂದು ಕೇಳಿಕೊಂಡು ನನ್ನ ಮಾತುಗಳನ್ನು ಮುಗಿಸುತ್ತೇನೆ.

ಉಪಾಧ್ಯಕ್ಷರು : ಈಗ ಸಂತಾಪ ಸೂಚನಾ ನಿರ್ಣಯದ ಮೇಲಿನ ಚರ್ಚೆ ಮುಗಿದಿದೆ . ಮೃತರ ಗೌರವಾರ್ಥ ಮಾನ್ಯ ಸದಸ್ಯರೆಲ್ಲರೂ ಎದ್ದು ನಿಂತು ಒಂದು ನಿಮಿಷ ಕಾಲ ಮೌನವನ್ನಾವರಿಸಬೇಕೆಂದು ಕೋರುತ್ತೇನೆ.

(ಮೃತರ ಗೌರವಾರ್ಥ ಸದನದ ಎಲ್ಲಾ ಸದಸ್ಯರು ಎದ್ದು ನಿಂತು ಒಂದು ನಿಮಿಷ ಮೌನವನ್ನಾಚರಿಸಿದರು)

ಉಪಾಧ್ಯಕ್ಷರು : ಈ ಸದನವು ಅಂಗೀಕರಿಸಿದ ಸಂತಾಪ ಸೂಚಕ ನಿರ್ಣಯವನ್ನು ಮೃತರ ಕುಟುಂಬ ವರ್ಗದವರಿಗೆ ಕಳುಹಿಸಿಕೊಡಲಾಗುವುದು. ಸದನವನ್ನು ಸಂಜೆ ನಾಲ್ಕು ಗಂಟೆಯವರೆಗೆ ಮುಂದೂಡಲಾಗಿದೆ.

(ಸದನವು ಮಧ್ಯಾಹ್ನ 3–30 ಗಂಟೆಗೆ ಮುಂದೂಡಲ್ಪಟ್ಟು ಪುನಃ ಸಂಜೆ 4–00 ಗಂಟೆಗೆ ಸಮಾವೇಶಗೊಳ್ಳಲು ನಿಶ್ಚಯಿಸಿತು.)

ಸದನವು ಮಧ್ಯಾಹ್ನ ಪುನಃ 4 ಗಂಟೆ 15 ನಿಮಿಷಕ್ಕೆ ಸಮಾವೇಶಗೊಂಡಿತು ಸನ್ಮಾನ್ಯ ಅಧ್ಯಕ್ಷರು (ಶ್ರೀ ಕೃಷ್ಣರವರು) ಅಧ್ಯಕ್ಷ ಪೀಠವನ್ನು ಅಲಂಕರಿಸಿದ್ದರು.

3. ಅಧ್ಯಕ್ಷರ ಅಪ್ಪಣೆ ಮೇರೆಗೆ ಪ್ರಸ್ತಾಪಿಲಾದ ವಿಷಯಗಳು:

ವಿಷಯ: ಬಹುಮತ ಸಾಬೀತುಗೊಳಿಸುವ ಬಗ್ಗೆ.

ಶ್ರೀ ಬಸವರಾಜ ರಾಯರೆಡ್ಡಿ : ಸನ್ಮಾನ್ಯ ಸಭಾಧ್ಯಕ್ಷರೆ, ನಾನು ಮತ್ತು ನಮ್ಮ ಸ್ನೇಹಿತ ಶಾಸಕರುಗಳಾದ ಸಿ.ಎಸ್. ನಾಡಗೌಡರು, ಎಂ.ಬಿ. ಪಾಟೀಲರು, ಮತ್ತು ಕುಮಾರ ಬಂಗಾರಪ್ಪನವರು ಒಂದು ಪತ್ರವನ್ನು ಕೊಟ್ಟಿದ್ದೇವೆ.

ಶ್ರೀ ಕೆ.ಎಸ್. ಈಶ್ವರಪ್ಪ : ಅಧ್ಯಕ್ಷರೆ, ಬೆಳಿಗ್ಗೆ ನಮ್ಮ ವಿರೋಧ ಪಕ್ಷದ ನಾಯಕರು ಮಾತನಾಡುವುದಕ್ಕೆ ಉಪಾಧ್ಯಕ್ಷರಿಗೆ ಅವಕಾಶ ಕೇಳಿದಾಗ ಅಡ್ಜರ್ನ್ ಮಾಡಿದರು. ದಯವಿಟ್ಟು ಮೊದಲು ಅವರಿಗೆ ಮಾತನಾಡುವುದಕ್ಕೆ ಅವಕಾಶ ಮಾಡಿಕೊಡಬೇಕು.

(ಗೊಂದಲ)

ಅಧ್ಯಕ್ಷರು : ಅವರು ಮಾತನಾಡಲಿ.

(ಗೊಂದಲ)

ಶ್ರೀ ಬಸವರಾಜ ರಾಯರೆಡ್ಡಿ : ಇವೊತ್ತು ನಾನು ಮತ್ತು ನಮ್ಮ....

ಮಾನ್ಯ ಸದಸ್ಯರು : ಮಾನ್ಯ ವಿರೋಧ ಪಕ್ಷದ ನಾಯಕರು ಈಗ ಮಾತನಾಡಲು ಎದ್ದು ನಿಂತಿದ್ದಾರೆ. ಮೊದಲು ಮಾತನಾಡಲು ಅವರಿಗೆ ಅವಕಾಶ ಮಾಡಿಕೊಡಬೇಕು.

ಶ್ರೀ ಕೆ.ಆರ್. ರಮೇಶ್‌ಕುಮಾರ್ : ಒಂದು ಸಂಪ್ರದಾಯವನ್ನಾದರೂ ಪಾಲನೆ ಮಾಡಿ ಸ್ವಾಮಿ.

(ಗೊಂದಲ)

ಶ್ರೀ ಬಸವರಾಜ ರಾಯರೆಡ್ಡಿ : ಮಾನ್ಯ ಅಧ್ಯಕ್ಷರೆ, ತಮ್ಮ ಬಗ್ಗೆ ನಮಗೆ ಅಪಾರವಾದ ಗೌರವವಿದೆ.

ಶ್ರೀ ಬಿ.ಎಸ್. ಯಡಿಯೂರಪ್ಪ : ಅಧ್ಯಕ್ಷರೆ, ನಾನು ವಿರೋಧ ಪಕ್ಷದ ನಾಯಕನಾಗಿ ಮಾತನಾಡಲು ಎದ್ದು ನಿಂತಿದ್ದೇನೆ. ದಯಮಾಡಿ ಮಾತನಾಡುವುದಕ್ಕೆ....

(ಗೊಂದಲ)

ಅಧ್ಯಕ್ಷರು : ದಯಮಾಡಿ ಎಲ್ಲರೂ ಕುಳಿತುಕೊಳ್ಳಿ. ಈಗ ವಿರೋಧ ಪಕ್ಷದ ನಾಯಕರಾದ ಯಡಿಯೂರಪ್ಪನವರು ಮಾತನಾಡಲಿ.

ಶ್ರೀ ಬಿ.ಎಸ್. ಯಡಿಯೂರಪ್ಪ : ಅಧ್ಯಕ್ಷರೆ, ಇವೊತ್ತು ಒಂದೇ ಮಾತು.

(ಗೊಂದಲ)

(ಕೆಲವು ಸದಸ್ಯರು ಎದ್ದು ನಿಂತು ಮಾತನಾಡುತ್ತಿದ್ದರು)

ಶ್ರೀ ಬಿ.ಎಸ್. ಯಡಿಯೂರಪ್ಪ : ಅಧ್ಯಕ್ಷರು ನನ್ನ ಹೆಸರನ್ನು ಕರೆದಿದ್ದಾರೆ, ಅಧ್ಯಕ್ಷರೆ, ಅವರಿಗೆ ಹೇಳಿ ನಾನು ಮಾತನಾಡಲು ಎದ್ದು ನಿಂತಾಗ, ...

ಅಧ್ಯಕ್ಷರು : ವಿರೋಧ ಪಕ್ಷದ ನಾಯಕರು ಮಾತನಾಡಲು ಎದ್ದು ನಿಂತಾಗ ಅವರಿಗೆ ಮಾತನಾಡಲು ಅವಕಾಶ ಮಾಡಿಕೊಡಿ. ನೀವು ಅನಂತರ ಮಾತನಾಡಿ.

ಮಾನ್ಯ ಸದಸ್ಯರು : ಮಾನ್ಯ ಅಧ್ಯಕ್ಷರೆ, ಮೊದಲು ಅವರಿಗೆ ಬಹುಮತ ಸಾಬೀತುಪಡಿಸುವುದಕ್ಕೆ ಹೇಳಿ. ಅನಂತರ ಮಾತನಾಡಲಿ.

(ಗೊಂದಲ)

ಅಧ್ಯಕ್ಷರು : ದಯಮಾಡಿ ಮಾನ್ಯ ಎಲ್ಲಾ ಸದಸ್ಯರು. ಕೇಳಬೇಕು. I am on my legs. ತಾವು ಐದೂವರೆ ಕೋಟಿ ಕನ್ನಡಿಗರನ್ನು ಪ್ರತಿನಿಧಿಸುತ್ತಿದ್ದೀರಿ. ಇವೊತ್ತು ಒಂದು ಗಂಭೀರವಾದ ವಿಚಾರ ನಮ್ಮ ಮುಂದಿದೆ. ಬೆಳಿಗ್ಗೆ obituary references ಇತ್ತು ಬಹಳಷ್ಟಯ ಜನರು ನಿಧನರಾಗಿದ್ದಾರೆ. ಅವರವರ ಕ್ಷೇತ್ರಗಳಿಗೆ ಸಂಬಂಧಿಸಿದವರು ನಿಧನರಾದವರು ಇದ್ದುದ್ದರಿಂದ ಮಾತನಾಡಲು ಲಿಬರಲ್ ಆಗಿ ಅವಕಾಶ ಮಾಡಿಕೊಟ್ಟಿದ್ದೇನೆ. ಈಗ ಮಾನ್ಯ ಮುಖ್ಯಮಂತ್ರಿಗಳು ವಿಶ್ವಾಸ ಮತವನ್ನು ಕೇಳಲಿದ್ದಾರೆ. ಯಾವ್ಯಾವುದೋ ವಿಚಾರಗಳನ್ನು ಎತ್ತಿಕೊಂಡು ಈ ಸದನದ ಗಾಂಭೀರ್ಯವನ್ನು ದಯಮಾಡಿ ಹಾಳು ಮಾಡಬೇಡಿ. ದಯಮಾಡಿ ಜವಾಬ್ದಾರಿಯಿಂದ ನಡೆದುಕೊಳ್ಳಿರಿ. ನಿಮ್ಮ ಪಕ್ಷ, ರಾಜಕೀಯದಿಂದ ನನ್ನನ್ನು ನೋಡಿರಿ. ಮಾನ್ಯ ವಿರೋಧ ಪಕ್ಷದ ನಾಯಕರಿಗೆ ಈಗ ಮಾತನಾಡಲು ಅವಕಾಶ ಮಾಡಿಕೊಡಬೇಕು.

(ಗೊಂದಲ)

ಶ್ರೀ ಬಿ.ಎಸ್. ಯಡಿಯೂರಪ್ಪ : ನೀವು ತಾನೇ ನಮಗೆ ರಕ್ಷಣೆ ಕೊಡಬೇಕು.

(ಗೊಂದಲ)

ಶ್ರೀ ಅರಗ ಜ್ಞಾನೇಂದ್ರ : ಅಧ್ಯಕ್ಷರೆ, ತಾವು ಅಸಹಾಯಕರಾಗಬಾರದು.

ಅಧ್ಯಕ್ಷರು : ಈಗ ನಾನು ಅಸಹಾಯಕನಲ್ಲ. ಕರ್ನಾಟಕದ ಐದೂವರೆ ಕೋಟಿ ಕನ್ನಡಿಗರು ಅಸಹಾಯಕರಾಗಿ ಬಿಟ್ಟಿದ್ದಾರೆ. ನಿಮ್ಮನ್ನೆಲ್ಲಾ ಇಲ್ಲಿಗೆ ಕಳುಹಿಸಿಬಿಟ್ಟು ಅವರು ಅಸಹಾಯಕರಾಗಿ ಬಿಟ್ಟಿದ್ದಾರೆ. ಯಡಿಯೂರಪ್ಪನವರೆ, ತಾವು ಈಗ ಮಾತನಾಡಿ. ಯಡಿಯೂರಪ್ಪನವರು ಏನು ಹೇಳುತ್ತಾರೆಂದು ಕೇಳೋಣ.

(ಗೊಂದಲ)

ಶ್ರೀ ಅಮರೇಗೌಡ ಪಾಟೀಲ್ ಬಯ್ಯಾಪೂರ್ : ಮಾನ್ಯ ಅಧ್ಯಕ್ಷರೇ, ಮಾನ್ಯ ಬಸವರಾಜ ರಾಯರೆಡ್ಡಿಯವರು ಮಾತನಾಡಿದ ಮಾತುಗಳು ಯಾವುದೂ ಕಡತಕ್ಕೆ ಹೋಗಬಾರದು.

ಅಧ್ಯಕ್ಷರು : ನಿಮಗೆ ನಾನು ಮಾತನಾಡಲು ಅವಕಾಶವನ್ನು ಕೊಡುತ್ತೇನೆ. ಈಗ ಅವರು ಮಾತನಾಡಲಿ, I have called the Opposition Leader. You please take your seats. ಮಾನ್ಯ ಬಿ.ಎಸ್. ಯಡಿಯೂರಪ್ಪನವರೇ, ತಾವು ಮಾತನಾಡಿ.

ಶ್ರೀ ಬಿ.ಎಸ್. ಯಡಿಯೂರಪ್ಪ (ವಿರೋಧಪಕ್ಷದ ನಾಯಕರು) : ಮಾನ್ಯ ಅಧ್ಯಕ್ಷರೇ, ನಾನು ಮಾತನಾಡಲು ಎರಡು ನಿಮಿಷಗಳನ್ನು ತೆಗೆದುಕೊಳ್ಳುತ್ತೇನೆ. ದಯಮಾಡಿ ಸಹಕರಿಸಬೇಕು. ಮಾನ್ಯ ರಾಜ್ಯಪಾಲರು ತಮಗೆ ಒಂದು ಆದೇಶವನ್ನು ಕಳುಹಿಸಿಕೊಟ್ಟಿದ್ದಾರೆ. ಅದರ ಪ್ರಕಾರ ಸನ್ಮಾನ್ಯ ಹಾಲಿ ಮುಖ್ಯಮಂತ್ರಿಯವರು, ಅವರ ಪರವಾಗಿ ವಿಶ್ವಾಸ ಮತವನ್ನು ಕೇಳಬೇಕೆಂದು ಇದೆ. ಅದು ಏನು contents ಇದೆ. I have requested the Chief Minister. ಮಾನ್ಯ ರಾಜ್ಯಪಾಲರು ಹೇಳಿರುವಂಥಾದ್ದು, ದಿ: 19.1.2006 ರಂದು ನಿಮಗೆ ಕಳುಹಿಸಿರುವ ಪ್ರತಿ ಇದು. "I have requested the Chief Minister Sri. Dharma Singh to prove that his Government enjoys the majority in the House on or before January 27th, 2006," as this is one clear week from the day that I was informed that a question has come up on whether the Government has a majority and thus, in my view, constitutes a reasonable period of time to permit the Chief Minister to prove his majority. The view point of the Government was that, it should be held not earlier than January 27th, 2006, I belt that January 27th was quite appropriate, taking into account the holidays and the planned programme of the House. So, ಮಾನ್ಯ ರಾಜ್ಯಪಾಲರು ಸನ್ಮಾನ್ಯ ಮುಖ್ಯಮಂತ್ರಿಯವರಿಗೆ ದಿ: 27.1.2006ರ ಒಳಗಾಗಿ ನಿಮ್ಮ ಬಹುಮತವನ್ನು ಸಾಬೀತು ಮಾಡಿಯೆಂದು ಹೇಳಿದ್ದಾರೆ. ಆ ಉದ್ದೇಶದಿಂದ ತಾವು 20ನೇ ತಾರೀಖಿನಂದು ನಡೆಯಬೇಕಾಗಿದ್ದ ಅಧಿವೇಶನವನ್ನು, ಮಾನ್ಯ ರಾಜ್ಯಪಾಲರ ಆದೇಶದಂತೆ ಇವತ್ತಿಗೆ ಅಧಿವೇಶನವನ್ನು ಮುಂದೂಡಿದ್ದೀರಿ, ಅದಕ್ಕೆ ನಾವು ತಲೆ ಬಾಗಿದ್ದೇವೆ. ಈಗ ತತ್ ತಕ್ಷಣ ಆಗಬೇಕಾಗಿರುವಂಥಾದ್ದು, ಮಾನ್ಯ ಮುಖ್ಯಮಂತ್ರಿಯವರು ತಮಗೆ ಬಹುಮತ ಇದೆಯೋ, ಇಲ್ಲವೊ, ಎಂಬುದನ್ನು ಮಂಡನೆ ಮಾಡುವಂಥಾದ್ದು. ಗೋವಾದಲ್ಲಿ ಮಾನ್ಯ ರಾಜ್ಯಪಾಲರು ಬಂದರು, ಆಗ ಕಾನ್ಫಿಡೆನ್ಸ್ ಮೋಶನ್ ಪ್ರಶ್ನೆ ಬಂತು. ಮಾನ್ಯ ಮುಖ್ಯಮಂತ್ರಿಯವರಿಗೆ ಕಾನ್ಫಿಡೆನ್ಸ್ ಮೋಷನ್ ಮೂವ್ ಮಾಡಿ ಎಂದು ಹೇಳಿದರು. ಯಾವುದೇ ಚರ್ಚೆ ಇಲ್ಲದೇ ಐದು ನಿಮಿಷದಲ್ಲಿ ಅವರ ಪರವಾಗಿ ಎಷ್ಟು ಜನರು ಇದ್ದಾರೆ. ಅವರ ವಿರುದ್ಧ ಎಷ್ಟು ಜನರು ಇದ್ದಾರೆಂದು ಕೇಳಿದರು. ತೀರ್ಮಾನವನ್ನು ತೆಗೆದುಕೊಂಡು ಹೋದರು. ಇವತ್ತು ಯಾವುದೇ ಚರ್ಚೆಯ ಅಗತ್ಯ ಇಲ್ಲ. ಈಗ ಮಾನ್ಯ ಮುಖ್ಯಮಂತ್ರಿಯವರು ಕಾನ್ಫಿಡೆನ್ಸ್ ಮೋಶನ್ ಅನ್ನು ಮೂವ್ ಮಾಡಲಿ, ಬಲಾಬಲದ ಪರೀಕ್ಷೆ ಆಗಲಿ, ಬಹುಮತ ಪಡೆದರೆ ಅಧಿಕಾರದಲ್ಲಿ ಮುಂದುವರೆಯಲಿ, ಇಲ್ಲದಿದ್ದರೆ ಅವರು ರಾಜೀನಾಮೆಯನ್ನು ಕೊಟ್ಟು, ಇತರೆ

ಯಾರು ಆಡಳಿತ ನಡೆಸುತ್ತಾರೆ, ಅವರಿಗೆ ಅವಕಾಶವನ್ನು ಮಾಡಿಕೊಡುವಂಥಾದ್ದು; ಇದು ಇವತ್ತಿನ ಉದ್ದೇಶವಿರುವಂಥಾದ್ದು. ನಾನು ತಮ್ಮಲ್ಲಿ ವಿನಂತಿ ಮಾಡಿಕೊಳ್ಳುವಂಥಾದ್ದು, ಇದಕ್ಕೆ ಅವಕಾಶ ಕೊಡುವಂಥಾದ್ದು ನಿಮ್ಮ ಜವಾಬ್ದಾರಿಯೂ ಇದೆ, ಇದು 27ನೇ ತಾರೀಖಿನೊಳಗೆ ಇದು ತೀರ್ಮಾನವಾಗಬೇಕೆಂದು ಆದೇಶವನ್ನು ಕೊಟ್ಟಮೇಲೆ, ನಾನು ಅಂದುಕೊಂಡಿರುವಂಥಾದ್ದು 19.1.06 ರಂದು ಜಾಯಿಂಟ್ ಸೆಷನ್ ನಡೆದಾಗ, ಮಾನ್ಯ ರಾಜ್ಯಪಾಲರ ಭಾಷಣ ನಡೆದಂತಹ ಸಂದರ್ಭದಲ್ಲಿ ಕೇವಲ 64–65ಜನ ಶಾಸಕರು ಮಾತ್ರ ಇದ್ದು, ಅವರಿಗೆ ಬಹುಮತವಿಲ್ಲವೆಂದು ಸಾಬೀತು ಆಗಿದೆ. ಮಾನ್ಯ ರಾಜ್ಯಪಾಲರ ಹತ್ತಿರ ಜೆಡಿ ಎಸ್‌ನ 46 ಜನ ಶಾಸಕರು, ಭಾರತೀಯ ಜನತಾ ಪಕ್ಷದ 77ಜನ ಶಾಸಕರು ಹೋಗಿ, ನಮ್ಮ ಪ್ರತಿಯೊಬ್ಬ ವ್ಯಕ್ತಿಯನ್ನು ಐಡೆಂಟಿಫೈ ಮಾಡಿ ನಮ್ಮ ಸಹಿಯನ್ನು ತೆಗೆದುಕೊಂಡು ಸುಮಾರು 123 ಜನರ ಬಲ ಇದೆಯೆಂದು, ನಮ್ಮ ಮಾನ್ಯ ಕುಮಾರ ಸ್ವಾಮಿಯವರನ್ನು ಎರಡೂ ಜಂಟಿ ಶಾಸಕಾಂಗ ಸಮಿತಿಯವರು ನಾಯಕರನ್ನಾಗಿ ಆಯ್ಕೆ ಮಾಡಿದ್ದೇವೆ. ಅವರನ್ನು ನಾಯಕರೆಂದು ಘೋಷಣೆ ಮಾಡಿ; ನಾವು ಇನ್ನು ಏನೂ ಡಿಟೈಲ್ಸ್‌ಗೆ ಹೋಗುವುದಿಲ್ಲ. ಅವರಿಗೆ ಬಹುಮತ ಇದೆಯೋ, ಇಲ್ಲವೊ, ಎಂಬ ಬಗ್ಗೆ ಮಾನ್ಯ ಮುಖ್ಯಮಂತ್ರಿಯವರಿಗೆ ಸಾಬೀತು ಮಾಡಲು ಹೇಳಿ. ಅವರಿಗೆ ಬಹುಮತ ಇದ್ದರೆ ಮುಂದುವರೆಯಲಿ, ಇಲ್ಲದಿದ್ದರೆ ಒಂದು ಕ್ಷಣ ತಡ ಮಾಡದೆ ರಾಜೀನಾಮೆಯನ್ನು ಕೊಟ್ಟರೆ, ಹೊಸ ಸರ್ಕಾರ ರಚನೆ ಮಾಡಲು ಅನುಕೂಲವಾಗುತ್ತದೆ. ಹಿಂದೆ ಒಂದು ರಾಜ್ಯಪಾಲರ ಭಾಷಣ ಆಗಿ ಇನ್ನೊಂದು ರಾಜ್ಯಪಾಲರ ಭಾಷಣ ಆಗುವವರೆಗೆ, ರಾಜ್ಯದ ಅಭಿವೃದ್ಧಿ ಕಾರ್ಯಗಳು ಸ್ಥಗಿತ ಆಗಿದೆ. ನಾವು ಬಲಾಬಲದ ಪರೀಕ್ಷೆಗಳಲ್ಲಿ ಗೊಂದಲದಲ್ಲಿ ಸಿಕ್ಕಿದ್ದೇವೆ. ನಾವೆಲ್ಲ ಒಟ್ಟಾಗಿ ಸೇರಿ, ಆ ಕಡೆ, ಈ ಕಡೆ ಇರುವ ಯಾರೇ ಆಗಲಿ, ರಾಜ್ಯದ ಹಿತದೃಷ್ಟಿಯಿಂದ ಕೆಲಸವನ್ನು ಮಾಡಬೇಕಾಗಿದೆ. ಇನ್ನು 3–4 ವಾರಗಳಲ್ಲಿ ಬಜೆಟ್ ಅನ್ನು ಮಂಡನೆ ಮಾಡಬೇಕಾಗಿದೆ. ಜನರು ನಮ್ಮನ್ನು ಆಯ್ಕೆ ಮಾಡಿ ಕಳುಹಿಸಿರುವಂಥಾದ್ದು, ನಮ್ಮ ಹಿತವನ್ನು ಕಾಪಾಡಿ ಎಂದು. ಈ ಬಲಾಬಲಗಳ ಪರೀಕ್ಷೆಗಳ ಮಧ್ಯೆ, ವ್ಯಕ್ತಿಗಲ ಪ್ರತಿಷ್ಠೆಯ ಮಧ್ಯೆ, ರಾಜ್ಯದ ಅಭಿವೃದ್ಧಿ ಕಾರ್ಯಗಳು ಸ್ಥಗಿತವಾಗಿರುವಂತಹ ಸಂದರ್ಭದಲ್ಲಿ ಒಂದು ಕ್ಷಣವೂ ತಡ ಮಾಡದೆನೇ, ದಯಮಾಡಿ ಮುಖ್ಯಮಂತ್ರಿಯವರು ಅವರಿಗೆ ಬಹುಮತ ಇದೆಯೋ, ಅಥವಾ ಇಲ್ಲವೊ, ಎನ್ನುವುದನ್ನು ಕೇಳಲಿ. ನೀವು ಅಂಕಿ ಸಂಖ್ಯೆಗಳ ಆಧಾರದ ಮೇಲೆ ತೀರ್ಮಾನವನ್ನು ತೆಗೆದುಕೊಳ್ಳಿ. ನಾವು ಯಾವುದೇ ಚರ್ಚೆಯಲ್ಲಿ ಭಾಗವಹಿಸುವುದಿಲ್ಲವೆಂಬ ಆಶ್ಯೂರೆನ್ಸ್ ಅನ್ನು ನಾವು ತಮಗೆ ಕೊಡುತ್ತೇನೆ. ಈ ಕಡೆಯಿಂದ ನಾವು ಯಾವುದೇ ಚರ್ಚೆಗೆ ನಾವು ಭಾಗವಹಿಸುವುದಕ್ಕೆ ಸಿದ್ದ ಇಲ್ಲ. ಅವರು ಮಂಡನೆ ಮಾಡಲಿ, ಯಾವ ರೀತಿಯಾಗಿ ವಿಶ್ವಾಸ ಮತವನ್ನು ಕೇಳುತ್ತಾರೋ, ಕೇಳಲಿ. ಅವರ ಪರವಾಗಿ ಇಲ್ಲಿ ಬಹುಮತ ಇದ್ದರೆ ಮುಂದುವರೆಯಲಿ, ಇಲ್ಲದಿದ್ದರೆ ಒಂದು ಕ್ಷಣ ತಡಮಾಡದೇ ರಾಜೀನಾಮೆ ಕೊಡಲಿ. ಈಗಾಗಲೇ ಅವರಿಗೆ ಬಹುಮತ ಇಲ್ಲವೆಂಬುದು ನಷ್ಟವಾಗಿದೆ ಆದರೂ ಸಹ ಎಲ್ಲಾ ವಾಮ ಮಾರ್ಗವನ್ನು ಅನುಸರಿಸಿಕೊಂಡು, ಅಧಿಕಾರದಲ್ಲಿ ಮುಂದುವರೆಯುವಂತಹ ಈ ಪ್ರತ್ನ ಏನು ಇದೆ, ಇದು ಪ್ರಜಾತಂತ್ರ ವ್ಯವಸ್ಥೆಗೆ ಇದು ಮಾರಕವಾದದ್ದು, ಇದು ಯಾರಿಗೂ ಶೋಭೆಯನ್ನು ತರುವಂಥಾದ್ದು ಅಲ್ಲ. ಇಡೀ ದೇಶದ ಜನರು ಕಾರ್ಯಕಲಾಪಗಳನ್ನು ನೋಡುತ್ತಿರುವಂತಹ ಕಾಲದಲ್ಲಿ, ಗೊಂದಲಕ್ಕೆ ಅವಕಾಶವಿಲ್ಲದೇನೇ ನಿಮಗೆ ಬಹುಮತ ಇದ್ದರೆ, ನೀವೇ ಮುಂದುವರಿಯಿರಿ. ಈ ಪ್ರಜಾತಂತ್ರ ವ್ಯವಸ್ಥೆಯಲ್ಲಿ ಆಡಳಿತ ಪಕ್ಷಕ್ಕೆ ಎಷ್ಟು ಜವಾಬ್ದಾರಿ ಇದೆಯೋ, ಅಷ್ಟೇ ಜವಾಬ್ದಾರಿ

ವಿರೋಧಪಕ್ಷದವರಿಗೂ ಜವಾಬ್ದಾರಿ ಇದೆ. ನಾವು ಇಷ್ಟು ವರ್ಷಗಳ ಕಾಲ ವಿರೋಧಪಕ್ಷದಲ್ಲಿ ಕುಳಿತು ಕೆಲಸವನ್ನು ಮಾಡಿದ್ದೇವೆ. 2004ರ mandate- ಬಹಳ ಸ್ಪಷ್ಟವಾಗಿ ಇದೆ, ಕಾಂಗ್ರೆಸ್‌ನ ವಿರುದ್ಧ. ಭಾರತೀಯ ಜನತಾ ಪಾರ್ಟಿಯವರು ಮೊದಲನೆಯ ಸ್ಥಾನದಲ್ಲಿ ಬಂದೆವು, ನಾವು ಜೆ ಡಿ ಎಸ್ ಪಕ್ಷ ಅವತ್ತೇ ಸೇರಿ, ಸಮಿಶ್ರ ಸರ್ಕಾರವನ್ನು ನಡೆಸಬೇಕಾಗಿತ್ತು. ಅದು ಯಾವುದೋ ಕಾರಣಕ್ಕೆ ಆಗಲಿಲ್ಲ. ಈಗ ಆ ಶುಭ ಗಳಿಗೆ ಬಂದಿದೆ. ಜನರ ಅಶೋತ್ತರ ಈಡೇರಿಸುವಂತಹ ಕಾಲ ಬಂದಿದೆ. ಈ ಸಂದರ್ಭದಲ್ಲಿ ನಾನು ಕಾಂಗ್ರೆಸ್ ಪಕ್ಷದ ಸ್ನೇಹಿತರಿಗೆ ಹೇಳುತ್ತೇನೆ. ಅಪಾರ ಅಧಿಕಾರದ ಅನುಭವ ನಿಮಗೆ ಇದೆ. ಕೇವಲ ಕುರ್ಚಿಗಾಗಿ ಎಲ್ಲಾ ರೀತಿಯ ವಾಮ ಮಾರ್ಗವನ್ನು ಅನುಸರಿಸದೇನೇ, ಗೌರವಯುತವಾಗಿ ತಮಗೆ ಬಹುಮತವಿಲ್ಲವೆಂದು ಗೊತ್ತಾದ ಮೇಲೆ ತಾವು ರಾಜೀನಾಮೆಯನ್ನು ಕೊಟ್ಟು ಹೋಗಿ. ಬಿ.ಜೆ.ಪಿ. ಮತ್ತು ಜೆ.ಡಿ. ಎಸ್ ಸಮಿಶ್ರ ಸರ್ಕಾರ, ಮಾನ್ಯ ಕುಮಾರಸ್ವಾಮಿಯವರ ನೇತೃತ್ವದಲ್ಲಿ ಸರ್ಕಾರ ಮಾಡಲು ಅವಕಾಶವನ್ನು ಮಾಡಿಕೊಡಿ ಎಂದು ನಾನು ತಮ್ಮಲ್ಲಿ ವಿನಂತಿ ಮಾಡುತ್ತೇನೆ.

(ಗೊಂದಲ)

ಶ್ರೀ ಜಿ.ವಿ. ಶ್ರೀರಾಮರೆಡ್ಡಿ : ಮಾನ್ಯ ಅಧ್ಯಕ್ಷರೇ, ನನ್ನದು ಒಂದು ಕ್ರಿಯಾಲೋಪ ಇದೆ.

ಅಧ್ಯಕ್ಷರು : ಈಗ ಮಾನ್ಯ ಬಸವರಾಜ ರಾಯರೆಡ್ಡಿಯವರನ್ನು ಕೂಡಿದ್ದೇನೆ. ಅವರು ಮಾತನಾಡಲಿ.

Sri G.V. Srirrama Reddy : Hon'ble Speaker, I am on a point of order.

ಶ್ರೀ ಸಿ. ಚೆನ್ನಿಗಪ್ಪ : ಮಾನ್ಯ ಅಧ್ಯಕ್ಷರೇ, ಮಾನ್ಯ ಕುಮಾರಸ್ವಾಮಿಯವರನ್ನು, ಜೆ.ಡಿ.ಎಸ್ ಪಕ್ಷದ ನಾಯಕರನ್ನಾಗಿ ಮಾಡತಕ್ಕದ್ದು.

Sri G.V. Srirrama Reddy : Sir, I am on a point of order.

(ಗೊಂದಲ)

ಅಧ್ಯಕ್ಷರು : ಎಲ್ಲರೂ ಕುಳಿತುಕೊಳ್ಳಿ, ಇಲ್ಲಿ ನೀವು ನೀವೇ ಆರ್ಗ್ಯೂ ಮಾಡಿದರೆ ಹೇಗೆ? ಮಾನ್ಯ ಶ್ರೀರಾಮರೆಡ್ಡಿಯರವೇ ತಾವು ಹೇಳೀ.

Sri G.V. Srirrama Reddy : Hon'ble Speaker, I am on point of order. According to the Supreme Court judgment and according to the 1.1.2004 constitutional amendment for the 10th Schedule. ಅದರ ಪ್ರಕಾರ ಈ ಸದನದ ಸದಸ್ಯತ್ವವನ್ನು ಕಳೆದುಕೊಂಡಿರುವವರು, 36ಜನ ಸದಸ್ಯರು ಇಲ್ಲಿ ಕುಳಿತುಕೊಂಡಿದ್ದಾರೆ. ಆದುದರಿಂದ ಈ ಸದನ ನಡೆಯುವುದಕ್ಕೆ ಆಗುವುದಿಲ್ಲ. This is my point of order. ನಾವು ನಿಮ್ಮ ಮುಂದೆ ಸಿಟಿಷನ್ ಅನ್ನು ದಾಖಲು ಮಾಡಿದ್ದೇವೆ. ತಾವು ಅದರ ಬಗ್ಗೆ ರೂಲಿಂಗ್ ಅನ್ನು ಕೊಡಿ, ನಂತರ ಸಭೆಯನ್ನು ನಡೆಸಿ.

(ಗೊಂದಲ)

ಅಧ್ಯಕ್ಷರು : ನಾನು ಸಭಾ ನಾಯಕರಿಗೆ ಹೇಳಿ ಕಳುಹಿಸಿದ್ದೇನೆ.

(ಗೊಂದಲ)

ಶ್ರೀ ಜಿ.ವಿ. ಶ್ರೀರಾಮರೆಡ್ಡಿ : ಅಧ್ಯಕ್ಷರೇ, ನೀವು ನಮ್ಮ ಸಿಟಿಷನ್‌ಗೆ ರೂಲಿಂಗ್ ಕೊಟ್ಟು, ಆಮೇಲೆ ಸದನ ನಡೆಸಿ.

(ಗೊಂದಲ)

ಮಾನ್ಯ ಸದಸ್ಯರು : ಸಭಾನಾಯಕರಿಗೆ ಹೇಳಿ ಕಳುಹಿಸಿ.

ಅಧ್ಯಕ್ಷರು : ನಾನು ಸಭಾನಾಯಕರಿಗೆ ಹೇಳಿಕಳುಹಿಸಿದ್ದೇನೆ.

(ಗೊಂದಲ)

ಮಾನ್ಯ ಸದಸ್ಯರು : ಸಭಾನಾಯಕರು ಹಾಜರಾಗಬೇಕು. ಸಭಾನಾಯಕರಿಗೆ ಸದನದ ಮೇಲೆ ಗೌರವವಿದ್ದರೆ ಅವರು ಕೂಡಲೇ ಬರಬೇಕು.

(ಗೊಂದಲ)

ಶ್ರೀ ಜಿ.ವಿ. ಶ್ರೀರಾಮರೆಡ್ಡಿ : ಅಧ್ಯಕ್ಷರೇ. ನಮಗೆ ತೀರ್ಮ ಕೊಡಿ. ಆಮೇಲೆ ನೀವು ಸದನ ನಡೆಸಿ. ನಾವು ಪಿಟಿಷನ್ ಹಾಕಿದ್ದೇವೆ. ಅದಕ್ಕೆ ತೀರ್ಮ ಕೊಡಿ, ಆಮೇಲೆ ಸದನ ನಡೆಸಿ. ಅದಕ್ಕೆ ನಮ್ಮ ಅಭ್ಯಂತರವೇನೂ ಇಲ್ಲ.

(ಗೊಂದಲ)

ಶ್ರೀ ಎ. ನಾರಾಯಣಸ್ವಾಮಿ : ಅಧಿಕಾರದಲ್ಲಿ ಮುಂದುವರಿಯಲಿಕ್ಕೆ ಇವರನ್ನೆಲ್ಲಾ ಏಜೆಂಟರನ್ನಾಗಿ ಮಾಡಿದ್ದಾರೆ.

(ಗೊಂದಲ)

ಶ್ರೀ ಜಿ.ವಿ. ಶ್ರೀರಾಮರೆಡ್ಡಿ : ನಾವು ನಿಮ್ಮ ಮುಂದೆ ಒಂದು ಕೇಸನ್ನು ದಾಖಲು ಮಾಡಿದ್ದೇವೆ.

(ಗೊಂದಲ)

ಅಧ್ಯಕ್ಷರು : ಶ್ರೀರಾಮರೆಡ್ಡಿಯವರು ಏನೋ ಹೇಳುತ್ತಿದ್ದಾರೆ ಕೇಳೋಣ.

Sri G..V. Srirama Reddy : We are Members of this House. we presented a position before you. ನಮ್ಮ ಸಿಟಿಷನ್ ಮೇಲೆ ರೂಲಿಂಗ್ ಕೊಟ್ಟು ನೀವು ಸದನವನ್ನು ನಡೆಸಿಕೊಳ್ಳಿ. It is our right to demand. We are demanded a ruling on our petition.

(ಗೊಂದಲ)

ಅಧ್ಯಕ್ಷರು : ಆಯಿತು, ನಾನು ಹೇಳುತ್ತೇನೆ, ದಯಮಾಡಿ ಕೇಳಿ.

(ಗೊಂದಲ)

ಶ್ರೀ ಜಿ.ವಿ. ಶ್ರೀರಾಮರೆಡ್ಡಿ : ಸನ್ಮಾನ್ಯ ಸಭಾಧ್ಯಕ್ಷರೇ, We are requesting you to give a ruling on our petition. Then you go ahead. ನೀವು ನಮ್ಮ ಸಿಟಿಷನ್ ಮೇಲೆ ರೂಲಿಂಗ್ ಕೊಡಿ, ಆಮೇಲೆ ನೀವು ಸದನವನ್ನು ನಡೆಸಿಕೊಳ್ಳಿ.

(ಗೊಂದಲ)

ಶ್ರೀ ಜಗದೀಶ್ ಶೆಟ್ಟರ್ : ವಿಶ್ವಾಸ ಮತ ಯಾಚನೆ ಇವತ್ತಿನ ಅಜೆಂಡಾ. ಮಾನ್ಯ ಶ್ರೀರಾಮರೆಡ್ಡಿಯವರು ಏನು ವಿಷಯವನ್ನು ಎತ್ತಿದ್ದಾರೆ, ಅದಕ್ಕೂ ಇದಕ್ಕೂ ಸಂಬಂಧವಿಲ್ಲ, ಅದನ್ನು ಚರ್ಚೆ ಮಾಡಲು ಬರುವುದಿಲ್ಲ.

(ಗೊಂದಲ)

ಅಧ್ಯಕ್ಷರು : ನಾನು ಎದ್ದುನಿಂತಿದ್ದೇನೆ. ಆದರೂ ನೀವೆಲ್ಲಾ ಹೀಗೆ ಮಾತನಾಡುತ್ತಿದ್ದರೆ ಹೇಗೆ? ಏನಿದು? ದಯಮಾಡಿ ಎಲ್ಲರೂ ಕುಳಿತುಕೊಳ್ಳಿ.

(ಗೊಂದಲ)

ಶ್ರೀ ವಾಟಾಳ್ ನಾಗರಾಜ್ : ನೀವು ರೂಲಿಂಗ್ ಕೊಡಿ ಸ್ವಾಮಿ. ನೀವು ಏನಾದರೂ ರೂಲಿಂಗ್ ಕೊಡಿ. ಆದರೆ ಮೊದಲು ರೂಲಿಂಗ್ ಕೊಡಿ.

(ಗೊಂದಲ)

ಶ್ರೀ ಜಗದೀಶ್ ಶೆಟ್ಟರ್ : ಇವತ್ತಿನ ಅಜೆಂಡಾ ವಿಶ್ವಾಸ ಮತ ಯೋಜನೆ. ಅವರು ಏನು ಪಿಟಿಷನ್ ಕೊಟ್ಟಿದ್ದಾರೆ, ಅದನ್ನು ಇಲ್ಲಿ ಚರ್ಚೆ ಮಾಡಲು ಬರುವುದಿಲ್ಲ.

ಶ್ರೀ ಬಿ.ಎಸ್. ಯಡಿಯೂರಪ್ಪ : ಸಂಬಂಧವಿಲ್ಲದ್ದು ಇದು.

(ಗೊಂದಲ)

ಶ್ರೀ ಆರ್. ಅಶೋಕ್ : ಜೆಡಿ (ಎಸ್)ಗೂ ಇವರಿಗೂ ಏನು ಸಂಬಂಧವಿದೆ?

ಶ್ರೀ ಬಿ.ಎಸ್. ಯಡಿಯೂರಪ್ಪ : ಏನು ಸಂಬಂಧ ಎಂದು ಕೇಳಿ.

(ಗೊಂದಲ)

ಶ್ರೀ ಬಿ.ಎಸ್. ಯಡಿಯೂರಪ್ಪ : ಸಭಾನಾಯಕರು ಬರಲಿ ಸರ್.

ಅಧ್ಯಕ್ಷರು : ನಾನು ಹೇಳಿ ಕಳುಹಿಸಿದ್ದೇನೆ.

(ಗೊಂದಲ)

ಶ್ರೀ ಬಿ.ಎಸ್. ಯಡಿಯೂರಪ್ಪ : ಬಹುಮತ ಇಲ್ಲ ಅಂತ ಹೋಗಿದ್ದಾರೆ.

(ಗೊಂದಲ)

ಶ್ರೀ ಬಿ.ಎಸ್. ಯಡಿಯೂರಪ್ಪ : ಬಹುಮತ ಇಲ್ಲ ಎಂದು ಅವರು ವಾಪಸ್ಸು ಹೋಗಿದ್ದಾರೆ.

ಅಧ್ಯಕ್ಷರು : ಯಡಿಯೂರಪ್ಪನವರೇ, ದಯಮಾಡಿ, ಹೇಳಿ ಕಳುಹಿಸಿದ್ದೇವೆ.

(ಗೊಂದಲ)

ಶ್ರೀ ಬಿ.ಎಸ್. ಯಡಿಯೂರಪ್ಪ : ಮೊದಲನೇ ಸಾಲಿನಲ್ಲಿ ಯಾವುದೇ ಮಂತ್ರಿಗಳಿಲ್ಲ. ಕಾಂಗ್ರೆಸ್‌ನ 64 ಜನ ಶಾಸಕರು ಇಲ್ಲಿ ಇಲ್ಲ. ಅಧಿಕಾರ ಬೇಕು ಎಂದು ಪ್ರಯತ್ನ ಮಾಡುತ್ತಿದ್ದಾರೆ, ಎಲ್ಲಾ ಫೈಲ್‌ಗಳನ್ನು ಕ್ಲಿಯರ್ ಮಾಡುವಂಥ ಪ್ರಯತ್ನ ಮಾಡಿದ್ದಾರೆ, ಅಧಿಕಾರ ದುರುಪಯೋಗ ಮಾಡಿಕೊಳ್ಳುತ್ತಿದ್ದಾರೆ.

ಶ್ರೀ ಜೆ.ವಿ. ಶ್ರೀರಾಮರೆಡ್ಡಿ : ಅಧ್ಯಕ್ಷರೆ, ಮೊದಲು ನೀವು ತೀರ್ಮಾನ ಕೊಡಿ. ಆಮೇಲೆ ನೀವು ಬೇರೆ ಏನನ್ನಾದರೂ ತೆಗೆದುಕೊಳ್ಳಿ. ರೂಲಿಂಗ್ ಕೊಡಿ. Whatever ruling you want, you can give. It is our right as a Member.

ಶ್ರೀ ಬಿ.ಎಸ್. ಯಡಿಯೂರಪ್ಪ : ಅಧಿಕಾರದ ಖುರ್ಚಿ ಇವರನ್ನು ಕಾಡುತ್ತಿದೆ. ಕಾಂಗ್ರೆಸ್ ಪಾರ್ಟಿಗೆ ಮೆಜಾರಿಟಿ ಇಲ್ಲ ಎಂದಮೇಲೆ ಅವರು ಒಂದು ಕ್ಷಣ ಅಧಿಕಾರದಲ್ಲಿ ಮುಂದುವರೆಯಬಾರದು. 2004ರ ಮ್ಯಾಂಡೇಟಿನ ವಿರೋಧ ಮಾಡಿಕೊಂಡು, ಹಿಂಬಾಗಿಲಿನಿಂದ ಅಧಿಕಾರಕ್ಕೆ ಬಂದಿರುವಂಥ ಜನ ಇವರು. ಇವರಿಗೆ ಮಾತನಾಡುವಂಥ ನೈತಿಕ ಹಕ್ಕು ಇದೆಯೇನು?

(ಗೊಂದಲ)

Sri G.V. Srirama Reddy : We are demanding your ruling.

(ಗೊಂದಲ)

ಶ್ರೀ ಅರಗ ಜ್ಞಾನೇಂದ್ರ : ಕಾಂಗ್ರೆಸ್‌ನವರು 64–65 ಜನ ಇದ್ದುಕೊಂಡು, ಕೆಲವು ಏಜೆಂಟರುಗಳನ್ನಿಟ್ಟುಕೊಂಡು ಆಡಳಿತ ಮುಂದುವರೆಸಬೇಕು ಎಂದು ನೋಡುತ್ತಿದ್ದಾರೆ.

(ಗೊಂದಲ)

ಅಧ್ಯಕ್ಷರು : ದಯಮಾಡಿ ಎಲ್ಲರೂ ಕುಳಿತುಕೊಳ್ಳಿ. ಸದನವನ್ನು ನಡೆಸುವುದಕ್ಕಾದರೂ ಬಿಡಿ.

(ಗೊಂದಲ)

ಶ್ರೀ ಬಿ.ಎಸ್. ಯಡಿಯೂರಪ್ಪ : ಮಾನ್ಯ ಧರ್ಮಸಿಂಗ್‌ರವರು ಮುಖ್ಯಮಂತ್ರಿಗಳಾಗಿದ್ದಾಗಲೂ ಕಾಲು ಎಳೆಯುವಂಥ ಕೆಲಸ ಮಾಡಿದರು. ದೇವೇಗೌಡರ ಬೆಂಬಲದಿಂದ ಧರ್ಮಸಿಂಗ್‌ರವರ ಸರ್ಕಾರ 18 ತಿಂಗಳು ಇತ್ತು, ಕಾಂಗ್ರೆಸ್ ಸರ್ಕಾರ ಅಲ್ಲ. ಇವತ್ತು ಏನಾದರೂ ಒಂದಷ್ಟು ಒಳ್ಳೆಯ ಕೆಲಸವಾಗಿದ್ದರೆ, ಅದು ಜನತಾದಳದ ಬೆಂಬಲದಿಂದ ಆಯಿತು ಈ ಕಾಂಗ್ರೆಸ್‌ನವರು ಏನೂ ಅಭಿವೃದ್ಧಿ ಕಾರ್ಯಗಳನ್ನು ಮಾಡಲಿಲ್ಲ. ಆದ್ದರಿಂದ, ಇವತ್ತು ಅವರು ನೋವಿನಿಂದ ವಾಪಸ್ಸು ಹೋಗಿದ್ದಾರೆ.

(ಗೊಂದಲ)

ಶ್ರೀ ವಾಟಾಳ್ ನಾಗರಾಜ್ : ನಮ್ಮ ಅರ್ಜಿಗೆ ತೀರ್ಪು ಕೊಡಿ. ನಾವು 25ನೇ ತಾರೀಖು ಪಿಟಿಷನ್ ಕೊಟ್ಟಿದ್ದೇವೆ.

ಅಧ್ಯಕ್ಷರು : ಅವರು ಒಂದು ಪಿಟೀಷನ್ ಕೊಟ್ಟಿದ್ದಾರೆ. ಅದರ ಬಗ್ಗೆ ರೂಲಿಂಗ್ ಕೇಳುತ್ತಿದ್ದಾರೆ. ತಾವುಗಳೆಲ್ಲ ಕಳೆದುಕೊಳ್ಳಿ.

(ಗೊಂದಲ)

ಶ್ರೀ ಬಿ.ಎಸ್. ಯಡಿಯೂರಪ್ಪ : ಇದಕ್ಕೆ ಪಾಯಿಂಡ್ ಆಫ್ ಆರ್ಡರ್ ಎಲ್ಲಿದೆ?

(ಗೊಂದಲ)

ಶ್ರೀ ಎ. ನಾರಾಯಣಸ್ವಾಮಿ : ಪಿಟಿಷನ್‌ಗೆ ಸದನದಲ್ಲಿ ಅನ್ಸರ್ ಮಾಡುವುದಲ್ಲ.

ಶ್ರೀ ವಾಟಾಳ್ ನಾಗರಾಜ್ : ಸುಪ್ರೀಂ ಕೋರ್ಟಿನ ಆದೇಶದ ಮೇಲೆ ನಮಗೆ ತೀರ್ಪು ಬೇಕು. 25ನೇ ತಾರೀಖು ನಾವು ನಿಮಗೆ ಕೊಟ್ಟಿರುವ ಅರ್ಜಿಗೆ ಉತ್ತರ ಕೊಡಿ.

(ಗೊಂದಲ)

ಶ್ರೀ ಜಿ.ವಿ. ಶ್ರೀರಾಮರೆಡ್ಡಿ : ರೂಲಿಂಗ್ ಕೊಡಿ ಮೊದಲು.

(ಗೊಂದಲ)

ಶ್ರೀ ಬಿ.ಎಸ್. ಯಡಿಯೂರಪ್ಪ : ಸುಪ್ರೀಂ ಕೋರ್ಟಿನ ಆದೇಶವೇನು? ಬಹುಮತ ಇಲ್ಲ ಎಂದರೆ ಅವರು ರಾಜೀನಾಮೆ ಕೊಟ್ಟು ಹೋಗಲಿ ಎಂದು.

(ಗೊಂದಲ)

ಮಾನ್ಯ ಸದಸ್ಯರು : ಸಭಾನಾಯಕರು ಈಗ ಎಲ್ಲಿಗೆ ಹೋಗಿದ್ದಾರೆ?

(ಗೊಂದಲ)

ಶ್ರೀ ವಾಟಾಳ್ ನಾಗರಾಜ್ : ನಮಗೆ ತೀರ್ಮ ಕೊಡಿ.

(ಗೊಂದಲ)

ಅಧ್ಯಕ್ಷರು : ಅವರು ಏನೋ ರೂಲಿಂಗ್ ಕೇಳುತ್ತಿದ್ದಾರೆ.

ಶ್ರೀ ಜಗದೀಶ್ ಶೆಟ್ಟರ್ : ಇವತ್ತು ವಿಶ್ವಾಸ ಮತದ ಬಗ್ಗೆ ಚರ್ಚೆಯಾಗಬೇಕು. ಇಲ್ಲಿ ಪಿಟಿಷನ್ ಬಗ್ಗೆ ಚರ್ಚೆ ಮಾಡುವಂಥ ಅವಶ್ಯಕತೆ ಇಲ್ಲ. It is entirely different.

(ಗೊಂದಲ)

ಅಧ್ಯಕ್ಷರು : ದಯಮಾಡಿ ಕುಳಿತುಕೊಳ್ಳಿ. ನಾನು ರೂಲಿಂಗ್ ಕೊಡುತ್ತೇನೆ.

ಶ್ರೀ ವಾಟಾಳ್ ನಾಗರಾಜ್ : ನೀವು ಏನಾದರೂ ತೀರ್ಮ ಕೊಡಿ. ಅದಕ್ಕೆ ನಮ್ಮದೇನೂ ಅಭ್ಯಂತರವಿಲ್ಲ. ಆದರೆ ಮೊದಲು ತೀರ್ಮ ಕೊಡಿ.

ಅಧ್ಯಕ್ಷರು : ಕೊಡುತ್ತೇನೆ, ದಯವಿಟ್ಟು ಕುಳಿತುಕೊಳ್ಳಿ.

(ಗೊಂದಲ)

ಶ್ರೀ ಬಿ.ಎಸ್. ಯಡಯೂರಪ್ಪ : ಇವರಿಗೆ ತಾಕತ್ತಿದ್ದರೆ, 19ನೇ ತಾರೀಖು ಜಂಟಿ ಅಧಿವೇಶನ ಆದ ಮೇಲೆ ನಾನು 20ನೇ ತಾರೀಖೂ ನೋ ಕಾನ್‌ಫಿಡೆನ್ಸ್ ರೋಷನ್ ಬೇಕಾದರೆ ಮೂವ್ ಮಾಡಬಹುದಾಗಿತ್ತು.

Sri G.V. Srirama Reddy : The House is not in order.

(ಗೊಂದಲ)

ಶ್ರೀ ಅಮರೇಗೌಡ ಬಯ್ಯಾಪುರ : ಅದನ್ನು ಹೇಳುವುದಕ್ಕೆ ಇವರು ಯಾರು? ಅಧ್ಯಕ್ಷರು ಇದ್ದಾರೆ. ಅದನ್ನು ಕೇಳುವುದಕ್ಕೆ ಇವರ್‍ಯಾರು?

(ಗೊಂದಲ)

ಶ್ರೀ ವಾಟಾಳ್ ನಾಗರಾಜ್ : ಸ್ವಾಮಿ, ನಮಗೆ ತೀರ್ಮ ಕೊಡಿ.

ಶ್ರೀ ಕೆ. ಶ್ರೀನಿವಾಸಗೌಡ : ಎಲ್ಲಾ ವಿಷಯಗಳ ಬಗ್ಗೆ ಚರ್ಚೆ ಮಾಡುವುದಕ್ಕೆ ಪ್ರತಿಯೊಬ್ಬ ಸದಸ್ಯರಿಗೂ ಹಕ್ಕಿದೆ. ಅದರ ಪ್ರಕಾರ ಅವರಿಗೆ ಮಾತನಾಡುವುದಕ್ಕೆ ಅಲೋ ಮಾಡಿ. ಅವರು ಹೇಳುವುದನ್ನು ಕೇಳಿ. ಮಾನ್ಯ ಶ್ರೀರಾಮರೆಡ್ಡಿಯವರು ಏನೋ ಹೇಳುತ್ತಿದ್ದಾರೆ, ಅದನ್ನು ಕೇಳೋಣ.

SRI G.V. SRIRAMA REDDY : Sir, we are on point of order. We have mentioned the constitutional provision. you give the ruling and then go ahead to your proceedings.

(ಗೊಂದಲ)

SRI JAGADISH SHETTAR : It cannot be discussed in this House. Who is the JD(s) Leader belongs to the Party, he cannot question it. Who is the JD(s) Leader, cannot question. It is the JD(s) party, they

can decide who is the Leader of that party. These persons have no locus-standle to file a petition. It cannot be discussed.

SRI G.V. SRIRAMA REDDY : Sir, I will read out the constitutional provision. Please allow me. I am on point of order. I have filed a petition.

SRI JAGADISH SHETTAR : He has no locus-standle to file a petition.

SRI G.V. SRIRAMA REDDY : I am on point of order.

SRI JAGADISH SHETTAR : He cannot question. He belongs to other party. You cannot allow him.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ : ಸಂವಿಧಾನದಲ್ಲಿರತಕ್ಕಂಥಾದ್ದನ್ನು ಹೇಳುವುದಕ್ಕೆ ನನಗೆ ದಯವಿಟ್ಟು ಅವಕಾಶ ಮಾಡಿಕೊಡಿ. I am on point of order. It is a constitutional right.

SRI JAGADISH SHETTAR : We have to discuss on vote of confidence, I request you pleads take the vote of confidence, for discussion.

SRI G.V. Sriram Reddy : Sir, we are on point of order, we have mentioned the constitutional provision. You give the ruling and then go ahead to your proceedings.

(ಗೊಂದಲ)

ಶ್ರೀ ವಾಟಾಳ್ ನಾಗರಾಜ್ : ತಾವು ತೀರ್ಪು ಕೊಡಲೇಬೇಕು.

ಅಧ್ಯಕ್ಷರು : ದಯವಿಟ್ಟು ಕುಳಿತುಕೊಳ್ಳಿ, ತಾವು ಕುಳಿತುಕೊಂಡ ಮೇಲೆ, ಏನು ರೂಲಿಂಗ್ ಕೊಡಬಹುದು ಎಂದು ನಾನು ಪರಿಶೀಲನ್ ಮಾಡುತ್ತೇವೆ. ಅವರ ಪಾಯಿಂಟ್ ಆಫ್ ಆರ್ಡರ್ ಮೇಲೆ ನಾನು ರೂಲಿಂಗ್ ಕೊಡಬೇಕು.

(ಗೊಂದಲ)

4. ಅಧ್ಯಕ್ಷರ ತೀರ್ಪು (ಕಾಯ್ದಿರಿಸಲಾಗಿದೆ)

ವಿಷಯ : ವಿಧಾನಸಭಾ ಸದಸ್ಯರಾದ ಶ್ರೀ ಹೆಚ್.ಡಿ. ಕುಮಾರಸ್ವಾಮಿ ಮತ್ತಿತರರ ಮೇಲೆ ಕ್ರಮ ಜರುಗಿಸುವ ಬಗ್ಗೆ.

ಅಧ್ಯಕ್ಷರು : ಈ ಸಭೆಗೆ ತಿಳಿಸುವುದೇನೆಂದರೆ, ಮಾನ್ಯ ವಿಧಾನಸಭಾ ಸದಸ್ಯರಾದ ಮಾನ್ಯ ವಾಟಾಳ್ ನಾಗರಾಜ್‌ರವರು, ಮಾನ್ಯ ಜಿ.ವಿ. ಶ್ರೀರಾಮರೆಡ್ಡಿಯವರು, ಹಾಗೂ ಮಾನ್ಯ ಎಸ್. ರಾಜೇಂದ್ರನ್‌ರವರು ದಿನಾಂಕ 25-1-2006ರ ರಾತ್ರಿ 9 ಗಂಟೆಗೆ ನನ್ನ ಕೊಠಡಿಗೆ ಬಂದು ಎರಡು ಪ್ರತ್ಯೇಕ ಅರ್ಜಿಗಳನ್ನು ನನಗೆ ಸಲ್ಲಿಸಿದ್ದಾರೆ. ಮಾನ್ಯ ವಿಧಾನಸಭಾ ಸದಸ್ಯರಾದ ಮಾನ್ಯ ಹೆಚ್.ಡಿ. ಕುಮಾರಸ್ವಾಮಿಯವರ ಮೇಲೆ ಒಂದು. ಇನ್ನೊಂದು ಮಾನ್ಯ ಚೆಲುವರಾಯಸ್ವಾಮಿ, ವಿಧಾನಸಭಾ ಸದಸ್ಯರು ಮತ್ತು 34 ಜನ ವಿಧಾನಸಭಾ ಸದಸ್ಯರ ಮೇಲೆ Karnataka Legislative Assembly disqualification of members on ground of defection) Rules,1986 ಮೇಲೆ ಕ್ರಮ ಜರುಗಿಸಬೇಕೆಂದು ಕೋರಿದ್ದಾರೆ. ಈ ಸದರಿ ಅರ್ಜಿಗಳನ್ನು ಉಲ್ಲೇಖಿತ ನಿಯಮಾವಳಿ 6ರ ಮೇಲೆ ಪರಿಶೀಲನೆ ಮಾಡಬೇಕಾಗುತ್ತದೆ. ಅದರನಂತರ, ಅರ್ಜಿಗಳು ಕ್ರಮವಾಗಿ ಇದ್ದಲ್ಲಿ ನಿಯಮ